# ಬುತ್ತಿ ಚಿಗುರು

## ಹಾವು ಕಚ್ಚಿದಾಗ...!

ಗುಂಡ: ನಿನ್ನೆ ರಾತ್ರಿ ನಂಗೆ ಮನೆ ಮನೆ ದಾಟುವಾಗ ಹಾವು ಕಚ್ಚಿದ್ದಕ್ಕೆ, ಕೆಳಗೆ ಬಂದೆ.

ಪುಂಡ: 'ಹೌದಾ, ನಿಂಗೇನೂ ಆಗಲಿಲ್ವಾ? ಆಮೇಲೆ ಏನು ಮಾಡಿದೆ' ಎಂದು ಕೇಳಿದ ಆತಂಕದಿಂದ.

ಗುಂಡ: ಮಾಡೋದೇನು, ಮತ್ತೆ ದಾಳ ಉರುಳಿಸಿದಾಗ, ಏಣಿ ಬಂದಿದ್ದಕ್ಕೆ ಹತ್ತಿ ಮೇಲೆ ಬಂದೆ...! ಎಂದಾಗ ಪುಂಡ ಸುಸ್ತಾದ.

**ವಿ.ವಿಜಯೇಂದ್ರ ರಾವ್**



---

## ಚೈನೀಸ್ ಕಣ್ಣು

ಈಚೆಗೆ ಎಲ್ಲೆಡೆ ಡೆಂಗಿ ಹೆಚ್ಚಾಗಿ ಗಾಯತ್ರಿಯೂ ಡೆಂಗಿ ಜ್ವರದಿಂದ ನರಳಿದ್ದಳು. ಜ್ವರ ಬಿಟ್ಟಿದ್ದರಿಂದ ಹಾಸಿಗೆಯಲ್ಲಿ ಮಲಗಿ ಗಾಯತ್ರಿ ವಿಶ್ರಾಂತಿ ಪಡೆಯುತ್ತಿದ್ದಾಗ ಮೊಮ್ಮಗಳು ಗುಡಿಯಾಳ ನೆನಪಿಸಿಕೊಳ್ಳುತ್ತಿದ್ದಳು.

ವಾರಕ್ಕೊಮ್ಮೆ ಫೋನ್ ಮಾಡುತ್ತಿದ್ದ ಗುಡಿಯಾ ಏಕೆ ಫೋನ್ ಮಾಡಿಲ್ಲ ಎಂದು ಅಂದುಕೊಳ್ಳುತ್ತಿರುವಾಗಲೇ ಮೊಮ್ಮಗಳ ವಿಡಿಯೊ ಕಾಲ್ ಧ್ವನಿಸಿತು.



ಹತ್ತು ವರ್ಷದ ಗುಡಿಯಾ ಡಾಕ್ಟರ್ ಆಗಬೇಕೆಂದು ಕನಸು ಕಾಣುತ್ತಿದ್ದ ಕಿಶೋರಿ. ವಿಡಿಯೊ ಕಾಲ್‌ನಲ್ಲಿ ಗುಡಿಯಾ, 'ಅಜ್ಜಿ ಹೇಗಿದ್ದೀರಿ, ನಿಮಗೆ ಡೆಂಗಿ ಆಗಿದೆಯಂತೆ. ಸೊಳ್ಳೆ ಹತ್ತಿರ ನೀವೇ ಹೋಗಿದ್ರಾ? ಹೇಗೆ ಕಚ್ಚಿಸಿಕೊಂಡಿರಿ? ಈಗ ಜ್ವರ ಇದೆಯಾ? ಒಂದೇ ಉಸುರಿಗೆ ಪ್ರಶ್ನೆಗಳು.

ಇದಕ್ಕೆ ಪ್ರತಿಯಾಗಿ ಅಜ್ಜಿ, ಈಗ ಆರಾಮವಾಗಿ ಇರುವೆನು. ಜ್ವರ ಬಿಟ್ಟಿದೆ ಎಂದರು. ಚೀನೀಯರ ಕಣ್ಣುಗಳು ಚಿಕ್ಕವು ಎಂಬುದನ್ನು ಅರಿತಿದ್ದ ಮೊಮ್ಮಗಳು ಜ್ವರದಿಂದ ಬಳಲಿದ್ದ ಅಜ್ಜಿಯ ಕಣ್ಣುಗಳನ್ನು ನೋಡಿ,' ಜ್ವರ ಇಲ್ಲ ಆರಾಮು ಅನ್ನುತ್ತಿದ್ದೀರಾ... ಮತ್ತ್ಯಾಕೆ ಚೈನೀಸ್ ಕಣ್ಣು ಬಿಡುತ್ತಿದ್ದೀರಾ' ಎಂದಾಗ ಮೊಮ್ಮಗಳ ಮಾತಿಗೆ ಅಜ್ಜಿ ಗಾಯತ್ರಿ ಮನಸಾರೆ ನಕ್ಕರು.

**ಸುಧಾ ವಿ.ಆರ್**